**ಸಾಕ್ಷಿಯನ್ನು ದಿನಾಂಕ 17-02-2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ ವಕೀಲರಿಂದಃ**

1. ದಾವಾ ಸ್ವತ್ತು ಮೂಲತಃ ಸಣ್ಣಪ್ಪ ಎಂಬುವವರಿಗೆ ಸೇರಿತ್ತು. ಸದರಿ ಸಣ್ಣಪ್ಪ ರವರಿಗೆ 60x80 ಅಡಿ ನಿವೇಶನ ಇತ್ತು. ಸದರಿ ನಿವೇಶನ ಸಣ್ಣಪ್ಪರವರಿಗೆ ಪಿತ್ರಾರ್ಜಿತವಾಗಿ ಬಂದಿತ್ತು. ಸಣ್ಣಪ್ಪರವರಿಗೆ ಸೇರಿತ್ತು ಎನ್ನಲಾದ ಸದರಿ ನಿವೇಶನ ಎಲ್ಲಿದೆ ಮತ್ತು ಅದರ ನಿಖರ ಅಳತೆ ತೋರಿಸುವ ದಾಖಲೆಗಳು ಇಲ್ಲ. ಹಳೆ ಪಂಚಾಯತಿ ದಾಖಲೆಗಳಲ್ಲಿ ನಿವೇಶನದ ಅಳತೆಯನ್ನು ಅಂಕಣದಲ್ಲಿ ತೋರಿಸುತ್ತಿದ್ದರು ಎಂದರೆ ಸರಿ. ಸಣ್ಣಪ್ಪನಿಗೆ ಸೇರಿತ್ತು ಎನ್ನಲಾದ ನಿವೇಶನವನ್ನು ಸರ್ಕಾರದಿಂದ ಅಳತೆ ಮಾಡಿಸಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಣ್ಣಪ್ಪರವರಿಗೆ ಒಟ್ಟು 3 ನಿವೇಶನಗಳು ಇತ್ತು ಎಂದರೆ ಸರಿ. ನಮಗೆ ಮಾರಾಟ ಮಾಡಿದ ನಿವೇಶನವನ್ನು ಹೊರತುಪಡಿಸಿ ಉಳಿದ ನಿವೇಶನಗಳನ್ನು ಸಣ್ಣಪ್ಪ ಯಾರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಣ್ಣಪ್ಪ ನಿವೇಶನಗಳನ್ನು ಮಾರಾಟ ಮಾಡುವಾಗ ಅವುಗಳನ್ನು ಅಳತೆ ಮಾಡಿಸಿದ್ದ ಬಗ್ಗೆ ದಾಖಲೆಗಳು ಇಲ್ಲ.

2. ಸಣ್ಣಪ್ಪನಿಗೆ ಸೇರಿತ್ತು ಎನ್ನಲಾದ 60x80 ಅಡಿ ನಿವೇಶನಕ್ಕೆ ಸಂಬಂಧಪಟ್ಟ ಪಂಚಾಯತಿ ದಾಖಲೆಗಳು ಈ ಹಿಂದೆ ಹೊಳೆಹೊನ್ನೂರು ಪಂಚಾಯತಿಯಲ್ಲಿ ಅಥವಾ ಪ್ರಸ್ತುತ ನಗರ ಸಭೆಯಲ್ಲಿ ಲಭ್ಯವಿಲ್ಲ. ನಮಗೆ ಸಣ್ಣಪ್ಪ ಮಾರಾಟ ಮಾಡಿದ 20x80 ಅಡಿ ನಿವೇಶನವನ್ನು ಹೊರತುಪಡಿಸಿ ಉಳಿದ ನಿವೇಶನವನ್ನು ಸಣ್ಣಪ್ಪ ಬೇರೆಯವರಿಗೆ ಮಾರಾಟ ಮಾಡಿದ್ದರು. ಆ

ನಂತರ ಅದರ ಖರೀದಿದಾರರು ಮತ್ತೊಬ್ಬರಿಗೆ ಮಾರಾಟ ಮಾಡಿದ್ದರು. ಸಣ್ಣಪ್ಪ ಬೇರೆಯವರಿಗೆ ತನ್ನ ಉಳಿಕೆ ನಿವೇಶನವನ್ನು ಮಾರಾಟ ಮಾಡಿದಾಗ ಅಥವಾ ಖರೀದಿದಾರರು ಪುನಃ ಬೇರೆಯವರಿಗೆ ಮಾರಾಟ ಮಾಡಿದ ಸಂದರ್ಭದಲ್ಲಿ ಸದರಿ ನಿವೇಶನವನ್ನು ಅಳತೆ ಮಾಡಿಲ್ಲ.

3. ಸಣ್ಣಪ್ಪನಿಗೆ ಸೇರಿದ್ದ ನಿವೇಶನವೂ ನಿಖರವಾಗಿ ಇಂತಿಷ್ಟೆ ಅಳತೆ ಹೊಂದಿತ್ತು ಎಂದು ತೋರಿಸುವ ಯಾವುದೇ ಸರ್ವೆ ದಾಖಲೆಗಳು ಅಥವಾ ನಕಾಶೆ ಇಲ್ಲ ಎಂದರೆ ಸರಿ. ನಾವು ಖರೀದಿ ಮಾಡಿದ ನಿವೇಶನ ನಿಖರವಾಗಿ ಎಲ್ಲಿದೆ ಎಂದು ತೋರಿಸಲು ನಕಾಶೆ ಇಲ್ಲ. ಸಾಕ್ಷಿ ಸ್ವ ಇಚ್ಚೆಯಿಂದ ನಾವು ಖರೀದಿ ಮಾಡಿದ ನಿವೇಶನ ಕಂದಾಯ ಭೂಮಿಯಲ್ಲಿರುವುದರಿಂದ ಅದಕ್ಕೆ ನಕಾಶೆ ಇಲ್ಲ ಎನ್ನುತ್ತಾರೆ. ಕೃಷಿ ಭೂಮಿಯಲ್ಲಿ ನಿವೇಶನ ಮಾಡಿ ಮಾರಾಟ ಮಾಡಿದ್ದರೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಕೃಷಿ ಭೂಮಿ ಯಾರಿಗೆ ಸೇರಿತ್ತು ಎಂಬ ಪ್ರಶ್ನೆಗೆ ಸಾಕ್ಷಿ ಸಣ್ಣಪ್ಪನಿಗೆ ಸೇರಿತ್ತು ಎನ್ನುತ್ತಾರೆ. ಕೃಷಿ ಭೂಮಿಯನ್ನು ನಿವೇಶನಗಳನ್ನು ಮಾಡುವ ಮೊದಲು ಯಾವುದೇ ನಕಾಶೆ ಬರೆದಿಲ್ಲ.

4. ಪ್ರತಿವಾದಿಯರು ಶಿವಣ್ಣ ಬಿನ್ ನಾಗಪ್ಪ ಎಂಬುವವರಿಂದ ಖಾಲಿ ನಿವೇಶನ ಖರೀದಿ ಮಾಡಿದ್ದರು. ಸದರಿ ನಿವೇಶನ ಸಹ ಸಣ್ಣಪ್ಪರವರಿಗೆ ಸೇರಿತ್ತೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎನ್ನುತ್ತಾರೆ. ಪ್ರತಿವಾದಿಯರು ಖರೀದಿ ಮಾಡಿದ್ದ ನಿವೇಶನ ಸಹ 20x80 ಅಡಿ ವಿಸ್ತೀರ್ಣ ಇದೆ. ಸದರಿ ನಿವೇಶನದ ಪೈಕಿ ಪ್ರತಿವಾದಿಯರು ಎಷ್ಟು ವಿಸ್ತೀರ್ಣದಲ್ಲಿ ಮನೆ ಕಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ನನ್ನ ಜಾಗ ಒತ್ತುವರಿ ಮಾಡಿ ಮನೆ ಕಟ್ಟಿದ್ದಾರೆ

ಎನ್ನುತ್ತಾರೆ. ಪ್ರತಿವಾದಿಯರು ನನಗೆ ಸೇರಿದ 4 ಅಡಿ ಜಾಗವನ್ನು ಒತ್ತುವರಿ ಮಾಡಿದ್ದಾರೆ ಎಂದು ನೀವು ಹೇಳಿರುವ ಪ್ರಕಾರ ಅವರ ಮನೆ 24 ಅಡಿ ಅಗಲ ಇದೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಮನೆ ಎಷ್ಟು ಅಗಲ ಇದೆ ಎನ್ನುವುದು ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ನನ್ನ ಆಸ್ತಿಯ ಉತ್ತರ ದಿಕ್ಕಿಗೆ ಇರುವ ಆಸ್ತಿ ಜಯಮ್ಮ ಎಂಬುವವರಿಗೆ ಸೇರಿದೆ. ಸದರಿ ಆಸ್ತಿಯನ್ನು ಜಯಮ್ಮ ಭೋಜಪ್ಪ ಎಂಬುವವರಿಂದ ಖರೀದಿ ಮಾಡಿದ್ದರು. ಸದರಿ ಆಸ್ತಿ ಸಹ ಸಣ್ಣಪ್ಪನಿಗೆ ಸೇರಿತ್ತು. ಜಯಮ್ಮನ ಮನೆಯ ವಿಸ್ತೀರ್ಣ ಎಷ್ಟಿದೆ ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿ ಪುನಃ ಅವರ ನಿವೇಶನದ ವಿಸ್ತೀರ್ಣ ಸಹ 20x80 ಅಡಿ ಇದೆ ಎನ್ನುತ್ತಾರೆ.

6. ಸಣ್ಣಪ್ಪ ಮಾರಾಟ ಮಾಡಿದ ನಿವೇಶನಗಳ ಸಂಬಂಧ ಅವರ ಬಳಿ ನಕಾಶೆ ಇದೆಯೋ-ಇಲ್ಲವೋ ನಾವು ಕೇಳಿಲ್ಲ. ಸಣ್ಣಪ್ಪ ತಮ್ಮ ಜಮೀನಿನಲ್ಲಿ ಒಟ್ಟು ಎಷ್ಟು ನಿವೇಶನ ಮಾಡಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಿಮ್ಮ ನಿವೇಶನದ ವಿಸ್ತೀರ್ಣ ಕಡಿಮೆ ಇದೆ ಎಂಬ ಕಾರಣಕ್ಕೆ ಈ ದಾವೆ ದಾಖಲಿಸಿದ್ದೀರಾ ಹೊರತು ಸದರಿ ನಿವೇಶನವನ್ನು ಯಾರು ಯಾವ ಭಾಗದಲ್ಲಿ ಒತ್ತುವರಿ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಖಚಿತವಾಗಿ ಗೊತ್ತಿಲ್ಲ ಎಂದರೆ ಸರಿ. ಸಣ್ಣಪ್ಪ ಮಾರಾಟ ಮಾಡಿರುವ ಎಲ್ಲಾ ನಿವೇಶನಗಳನ್ನು ಅಳತೆ ಮಾಡದೆ ಯಾವುದೇ ನಿವೇಶನದ ನಿಖರವಾದ ಗಡಿ ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿ.

7. ಪ್ರತಿವಾದಿಯರು 6.096x24.384 ಮೀಟರ್ ವಿಸ್ತೀರ್ಣದ ನಿವೇಶನವನ್ನು ಖರೀದಿ ಮಾಡಿ ಅಪಾರ ಹಣ ವ್ಯಯಿಸಿ ಅದರಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸರಿ. ಸದರಿ ಮನೆಯ ಉತ್ತರ ಭಾಗಕ್ಕೆ 2 ಅಡಿ 7 ಇಂಚು ವಿಸ್ತೀರ್ಣದ ಜಾಗವನ್ನು ಪ್ರತಿವಾದಿಯರು ಖಾಲಿ

ಬಿಟ್ಟಿದ್ದಾರೆ ಎಂದರೆ ಸರಿಯಲ್ಲ. ಸಣ್ಣಪ್ಪನಿಂದ ನಾವು ಖರೀದಿ ಮಾಡಿದ್ದೇವೆ ಎನ್ನಲಾದ ನಿವೇಶನದ ಮಾಲಿಕತ್ವದ ಸಂಬಂಧ ನಮಗೆ ಮತ್ತು ವಿಶ್ವನಾಥ ಎಂಬುವವರ ನಡುವೆ ಹಿಂದಿನಿಂದಲೂ ನ್ಯಾಯಾಲಯದಲ್ಲಿ ವ್ಯಾಜ್ಯ ಇದೆ ಎಂದರೆ ಸರಿ. ಸಾಕ್ಷಿ ಪುನಃ ಸದರಿ ವಿಶ್ವನಾಥ ಮತ್ತು ಅವರ ಅಣ್ಣ ಕೃಷ್ಣಮೂರ್ತಿ ನಮ್ಮ ವಿರುದ್ಧ ಸಲ್ಲಿಸಿದ್ದ ದಾವೆ ವಜಾ ಆಗಿದೆ ಎನ್ನುತ್ತಾರೆ.

8. ದಾವಾ ಸ್ವತ್ತಿನ ಖಾತೆ ದಾಖಲೆಗಳು ಈ ಹಿಂದೆ ಸೋಮಶೇಖರಪ್ಪ ಎಂಬವವರ ಹೆಸರಿಗೆ ಇತ್ತು. ಸಾಕ್ಷಿ ಪುನಃ ಈಗ ಸದರಿ ಖಾತೆ ನನ್ನ ತಾಯಿಯಾದ ವಾದಿಯ ಹೆಸರಿಗೆ ಬದಲಾವಣೆಯಾಗಿದೆ ಎನ್ನುತ್ತಾರೆ. ಗ್ರಾಮ ಠಾಣಾ ಆಸ್ತಿ ಎಲ್ಲಿ ಬರುತ್ತದೆ ಎಂದು ತಿಳಿದುಕೊಳ್ಳುವ ಸಲುವಾಗಿ ನಾವು ಪಿ ಡಿ ಓ ರವರಿಗೆ ಅರ್ಜಿ ಕೊಟ್ಟಿದ್ದರಿಂದ ಸದರಿಯವರು ನಿ.ಪಿ.–1 ರಂತೆ ತಹಶೀಲ್ದಾರ್ ರವರಿಗೆ ನಕಾಶೆ ಒದಗಿಸುವಂತೆ ಪತ್ರ ಬರೆದಿದ್ದರು ಎಂದರೆ ಸರಿ. ನಾವು ಅರ್ಜಿಯಲ್ಲಿ ಉಲ್ಲೇಖಿಸಿದ್ದ ಚಕ್ಕುಬಂಧಿಯನ್ನೇ ತಹಶೀಲ್ದಾರ್ ರವರು ನಿ.ಪಿ.–1 ರ ದಾಖಲೆಯಲ್ಲಿ ನಮೂದಿಸಿದ್ದಾರೆ ಎಂದರೆ ಸರಿ.

9. ಪ್ರತಿವಾದಿಯರು ದಾವಾ ಸ್ವತ್ತನ್ನು ಒತ್ತುವರಿ ಮಾಡಿದ್ದಾರೆ ಎಂದು ಖಚಿತ ಪಡಿಸಿಕೊಳ್ಳಲು ಅದನ್ನು ಅಳತೆ ಮಾಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಅರ್ಜಿ ಕೊಡಲು ಹೋಗಿದ್ದೆವು ಆದರೆ ಕೋವಿಡ್ ಕಾರಣ ಅರ್ಜಿ ಪಡೆಯಲಿಲ್ಲ ಎನ್ನುತ್ತಾರೆ. ನನ್ನ ತಂದೆಯ ಹೆಸರಿಗೆ ಸಣ್ಣಪ್ಪ ಬರೆದುಕೊಟ್ಟಿರುವ ಕ್ರಯ ಪತ್ರದಲ್ಲಿ ಉಲ್ಲೇಖಿಸಲಾಗಿರುವ ವಿಸ್ತೀರ್ಣವನ್ನು ದಾವಾ ಸ್ವತ್ತಿಗೆ ಸಂಬಂಧಪಟ್ಟ ಎಲ್ಲಾ ಪಂಚಾಯತಿ ದಾಖಲೆಗಳಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ.

ನನ್ನ ತಂದೆ ದಾವಾ ನಿವೇಶನವನ್ನು ಖರೀದಿ ಮಾಡುವಾಗ ಸಣ್ಣಪ್ಪನಿಗೆ ಸೇರಿದ ಎಲ್ಲಾ ನಿವೇಶನಗಳು ಖಾಲಿ ಇದ್ದವು ಎಂದರೆ ಸರಿ. ಈ ದಾವೆ ಸಲ್ಲಿಸುವಾಗ ಪ್ರತಿವಾದಿಯರು ತಮ್ಮ ನಿವೇಶನದಲ್ಲಿ ಕಟ್ಟಲಾಗಿರುವ ಮನೆಯ ಮೇಲ್ಚಾವಣಿಗೆ ಆರ್.ಸಿ.ಸಿ ಹಾಕಿಸುತ್ತಿದ್ದರು ಎಂದರೆ ಸಾಕ್ಷಿ ಆಗ ಅಡಿಪಾಯ ಮಾತ್ರ ಹಾಕಲಾಗಿತ್ತು ಎನ್ನುತ್ತಾರೆ.

10. ನಿ.ಪಿ.–13 ರಿಂದ 18 ರ ಫೋಟೋಗಳನ್ನು ನಿಖರವಾಗಿ ಯಾವ ದಿನಾಂಕದಂದು ತೆಗೆಯಲಾಗಿದೆ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಸದರಿ ಫೋಟೋಗಳನ್ನು ಮೊಬೈಲ್ ನಲ್ಲಿ ತೆಗೆಯಲಾಗಿದೆ ಹಾಗಾಗಿ ದಿನಾಂಕ ನಮೂದಾಗಿದೆ ಎನ್ನುತ್ತಾರೆ. ಮೊಬೈಲ್ ನಲ್ಲಿ ತೆಗೆಯಲಾಗಿದೆ ಎನ್ನಲಾದ ಸದರಿ ಫೋಟೋಗಳಿಗೆ ಸಂಬಂಧಪಟ್ಟ ನಿರ್ಧಿಷ್ಟ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾನು ಹೇಳುವಂತೆ ಫೋಟೋಗಳಲ್ಲಿ ಯಾವುದೇ ದಿನಾಂಕ ನಮೂದಾಗಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**